**<u>ನನ್ನ ಬಂಡೆಯು ನೀನೆನಯ್ಯಾ</u>**

ನನ್ನ ಬಂಡೆಯು ನೀನೆನಯ್ಯಾ
ನನ್ನ ಕಾಯುವ ದೇವರು ನೀನೇ
ಬಲವು ಮಹತ್ವವು ನಿನೆಗೇ ಎಂದು
ಮಹಿಮೆಗೆ ಯೋಗ್ಯನು ನೀ

ಆರಾಧನೆ ನಿನಗೆ ಆರಾಧನೆ ನಿನಗೆ (2)

ನನ್ನ ಬಲಹೀನ ಸಮಯದಲ್ಲೀ
ನಿನ್ನ ಕೃಪೆಯನ್ನು ನೀಡಿರುವೆ
ಯೇಸು ರಾಜ ನನ್ನ ಬಲವು ನೀನೇ
ಭಯವಿಲ್ಲ ನನಗೆಂದಿಗೂ

ನನ್ನ ಜೀವಿತ ಕಾಲವೆಲ್ಲಾ
ನಿನ್ನ ಸ್ತುತಿಸಿ ಹಾಡುವೆನು
ರಾಜನೆ ನಿನ್ನ ಉಪಕಾರವ
ಎಣ್ಣಿಸಿ ಸ್ತುತಿಸುವೆನು